೪೫ ಕಿಲೋಮೀಟರ್ ದೂರದ ಕಾರ್ಕಳಕ್ಕೆ ನಮ್ಮ ಜನರು ಈ ನ್ಯಾಯಾಲಯಕ್ಕೋಸ್ಕರ ಹೋಗಿ ಬರುವುದಕ್ಕೆ ತುಂಬಾ ತೊಂದರೆ ಪಡುತ್ತಿದ್ದಾರೆ. ನಮ್ಮ ಮುಲ್ಕಿ ವಲಯದಲ್ಲಿ ಅನೇಕ ಕೇಸುಗಳು ಇವೆ. ಒಂದು ನ್ಯಾಯಾಲಯವನ್ನು ಸ್ಥಾಪಿಸುವ ಕೇಸುಗಳು ಅಲ್ಲಿವೆ. ಆದ್ದರಿಂದ ಆದಷ್ಟುಬೇಗ ಮುಲ್ಕಿಯಲ್ಲಿ ನ್ಯಾಯಾಲಯವನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದ ನಿರ್ಧಾರ ಏನು ಎಂಬುದನ್ನು ತಿಳಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೆ, ಬ್ರಿಟಿಷರ ಕಾಲದಲ್ಲಿ ಅಲ್ಲಿ ಕೋರ್ಟ್ ಇತ್ತೋ ಇಲ್ಲವೋ ಎಂಬ ಬಗ್ಗೆ ಸಂಶೋಧನೆಯನ್ನು ನಾವು ಮಾಡಿಲ್ಲ. ಆದರೆ ಈಗತಾನೇ ಮಾನ್ಯ ಸದಸ್ಯರಾದ ಸಿದ್ದನಗೌಡರ್‌ರವರು ಇದೇರೀತಿಯ ನ್ಯಾಯಾಲಯವನ್ನು ತಮ್ಮ ತಾಲ್ಲೂಕ್ ಕೇಂದ್ರದಲ್ಲೂ ತೆಯಬೇಕೆಂಬ ಬಗ್ಗೆ ಪ್ರಸ್ತಾಪ ಮಾಡಿದ್ದನ್ನು ಮಾನ್ಯ ಸದಸ್ಯರು ಕೇಳಿದ್ದಾರೆ ಹೀಗೆ ಅನೇಕ ತಾಲ್ಲೂಕು ಕೇಂದ್ರಗಳಲ್ಲೇ ನ್ಯಾಯಾಲಯ ಇಲ್ಲದಿರುವಾಗ ಇನ್ನು ಹೋಬಳಿ ಮಟ್ಟದಲ್ಲಿ ನ್ಯಾಯಾಲಯವನ್ನು ತೆರೆಯಲು ಸಾಧ್ಯವೇ ಎಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಹೋಬಳಿ ಕೇಂದ್ರದಲ್ಲಿ ನ್ಯಾಯಾಲಯವನ್ನು ತೆರೆಯಲು ಸಾಧ್ಯವಿಲ್ಲವೆಂದು ಹೈಕೋರ್ಟ್‌ನವರು ಪ್ರಸ್ತಾಪ ಮಾಡಿದ್ದಾರೆ. ಅಲ್ಲದೆ ಮುಲ್ಕಿಯಲ್ಲಿ ಕೋರ್ಟ್‌ನ್ನು ಮಾಡುವುದಕ್ಕಾಗುವುದಿಲ್ಲವೆಂದು ಅವರು ಬರೆದಿದ್ದಾರೆ. ತಾವು ಅಲ್ಲಿ ಸಾಕಷ್ಟು ಕೇಸ್‌ಗಳಿವೆ ಎಂದು ಹೇಳುತ್ತಿರುವುದರಿಂದ ಇನ್ನೊಂದುಸಾರಿ ಹೈಕೋರ್ಟ್‌ನವರಿಗೆ ಒಂದು ಪತ್ರವನ್ನು ಬರೆಯಬಹುದಷ್ಟೆ. ಒಂದು ಮಾತಿನಲ್ಲಿ ಹೇಳುವುದಾದರೆ ನಮ್ಮ ಇಡೀ ಕರ್ನಾಟಕದ ಚಿತ್ರವನ್ನು ನೋಡಿದರೆ ತಾಲ್ಲೂಕು ಕೇಂದ್ರಗಳಲ್ಲಿ ಎಲ್ಲೂ ಕೂಡ ಕೋರ್ಟ್‌ಗಳು ಇಲ್ಲದಿರುವಾಗ ಅಂಥಾದ್ದರಲ್ಲಿ ಹೋಬಳಿ ಕೇಂದ್ರದಲ್ಲಿ ಕೋರ್ಟ್‌ನ್ನು ತೆರೆಯುತ್ತಾರೋ ಅಥವಾ ಇಲ್ಲವೋ ಎಂದು ನಮಗೆ ಹೇಳುವುದಕ್ಕೆ ಬರುವುದಿಲ್ಲ.

ಕಲಾಸಿ ಪಾಳ್ಯಂ ಬಸ್ ನಿಲ್ದಾಣವನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತೆಗೆದುಕೊಳ್ಳುವ ಬಗ್ಗೆ

೪೭೮ ಶ್ರೀ ಪೆರಿಕಾಲ್ ಎಂ. ಮುಲ್ಲಪ್ಪ, (ಚಿಕ್ಕಪೇಟೆ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನ ಕಲಾಸಿಪಾಳ್ಯಂ ಬಸ್ ನಿಲ್ದಾಣವನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ನಗರ ಕಾರ್ಪೊರೇಷನ್‌ನಿಂದ ತೆಗೆದುಕೊಳ್ಳುವ ಪ್ರಸ್ತಾವನೆ ಏನಾದರೂ ಇದೆಯೇ ?

ಆ) ಹಾಗಿದ್ದಲ್ಲಿ ಈ ಬಸ್ ನಿಲ್ದಾಣವನ್ನು ಕಾರ್ಪೊರೇಷನ್‌ನಿಂದ ಸಾರಿಗೆ ಸಂಸ್ಥೆಗೆ ತೆಗೆದುಕೊಳ್ಳಲು ಜರೂರು ಕ್ರಮ ತೆಗೆದುಕೊಳ್ಳಲಾಗುವುದೇ ?

ಇ) ಕಲಾಸಿಪಾಳ್ಯಂ ಬಸ್ ನಿಲ್ದಾಣವನ್ನು ಸಂಪೂರ್ಣವಾಗಿ ನವೀಕರಿಸಿ ಅಭಿವೃದ್ಧಿಪಡಿಸಿ, ನಗರ ಸಾರಿಗೆ ಹಾಗೂ ಗ್ರಾಮಾಂತರ ಸಾರಿಗೆ ಬಸ್ ನಿಲ್ದಾಣವನ್ನು ಕಟ್ಟಲು ಯೋಚಿಸಲಾಗಿದೆಯೇ ?

ಈ) ಅಲ್ಲಿಯವರೆಗೆ ಈ ನಿಲ್ದಾಣವನ್ನು ಶುಚಿಯಾಗಿಟ್ಟು ಪ್ರಯಾಣಿಕರಿಗೆ ಅನುಕೂಲ ಮಾಡಿ ಕೊಡಲು ಕ್ರಮ ತೆಗೆದುಕೊಳ್ಳಲಾಗುವುದೇ ?

ಉ) ಹಾಗಿದ್ದಲ್ಲಿ, ಏನೇನು ಕ್ರಮ ತೆಗೆದುಕೊಳ್ಳಲಾಗುವುದು ? ಎಷ್ಟು ಅವಧಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು).—

ಅ) ಇದೆ

ಆ) ಈ ಪ್ರಸ್ತಾವನೆಯು ವಿಚಾರ ವಿನಿಮಯದ ಪ್ರಾಥಮಿಕ ಹಂತದಲ್ಲಿದೆ.

ಇ) ಕಲಾಸಿಪಾಳ್ಯಂ ಬಸ್ ನಿಲ್ದಾಣವನ್ನು ಸ್ವಾಧೀನ ಮಾಡಿಕೊಂಡ ನಂತರ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು.

ಈ) ಬೆಂಗಳೂರು ಮಹಾನಗರಪಾಲಿಕೆಯು ಅಲ್ಲಿಯವರೆಗೆ ಈ ಬಗ್ಗೆ ಸೂಕ್ತ ಕ್ರಮತೆಗೆದು ಕೊಳ್ಳುವುದು.

ಆ) ಮೂರು ಸರದಿಯಲ್ಲಿ ಆರು ಪೌರ ಕಾರ್ಮಿಕರಂಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯು ಈ ಕೆಳಕಂಡ ವೇಳೆಗಳಲ್ಲಿ ಕಳುಹಿಸಿ ಈ ಸ್ಥಳಗಳನ್ನು ಜೊಕ್ಕಟ ಮಾಡಲಾಗುತ್ತಿದೆ.

೧) ಬೆಳಿಗ್ಗೆ ೬-೩೦ ರಿಂದ ೧೦-೩೦ರವರೆಗೆ
ಬೆಳಿಗ್ಗೆ ೧೧ ರಿಂದ ೧-೦೦ರ ವರೆಗೆ
ಮಧ್ಯಾಹ್ನ ೧-೩೦ ರಿಂದ ೪-೩೦ರವರೆಗೆ (ಬುಧವಾರ ಮತ್ತು ಶನಿವಾರ ದಿವಸಗಳು ಬಿಟ್ಟು)

೨) ಪ್ರಯಾಣಿಕರ ಅನುಕೂಲಕ್ಕಾಗಿ ಎರಡು ಸುಲಭ ಶೌಚಾಲಯಗಳನ್ನು ನಡೆಸಲಾಗುತ್ತಿದೆ.

೩) ಕಲಾಸಿಪಾಳ್ಯಂ ಬಸ್ ಸ್ಟ್ಯಾಂಡಿನ ಚರಂಡಿ ಮತ್ತು ಪಾದಾಚಾರಿಗಳ ರಸ್ತೆಯನ್ನು ದುರಸ್ತಿ ಮಾಡಲಾಗಿದೆ.

೪) ದೊಡ್ಡ ಮಾದರಿ ವಿಶಾಲವಾದ ಕಪಡ ತೊಟ್ಟಿಗಳನ್ನು ಕಲಾಸಿಪಾಳ್ಯಂ ಬಸ್‌ಸ್ಟ್ಯಾಂಡಿನಲ್ಲಿ ಇಡಲಾಗಿದೆ.

ಶ್ರೀ ಪೆರಿಕಾಲ ಎಂ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೆ, ಕಲಾಸಿಪಾಳ್ಯ ಬಸ್‌ಸ್ಟ್ಯಾಂಡ್ ಬಹಳ ಹಳೆಯ ಬಸ್‌ಸ್ಟ್ಯಾಂಡ್ ತಮಗೇ ಗೊತ್ತಿರುವಂತೆ ಸುಭಾಷ್ ನಗರದ ಬಸ್‌ಸ್ಟ್ಯಾಂಡ್‌ನ್ನು ಕಟ್ಟುವುದಕ್ಕೆ ಮುಂಚೆ ಬೇರೆ ಬೇರೆ ಊರುಗಳಿಗೆ ಜನರು ಹೋಗಬೇಕಾದರೆ ಈ ಕಲಾಸಿಪಾಳ್ಯಂ ಬಸ್‌ಸ್ಟ್ಯಾಂಡ್‌ಗೇ ಹೋಗುತ್ತಿದ್ದರು. ಇವತ್ತು ಈ ಬಸ್‌ಸ್ಟ್ಯಾಂಡ್ ಬಹಳ ಹಳೆಯದಾಗಿದ್ದು ಬಹಳ ಗಲೀಜು ಬಹಳ ವಾಗಿದೆ. ಜನರು ಓಡಾಡುವದಕ್ಕೂ ಸಾಧ್ಯವಿಲ್ಲದಷ್ಟು ಗಲೀಜಾಗಿದೆ ಈ ಬಸ್‌ಸ್ಟ್ಯಾಂಡ್‌ನ ಸುತ್ತ ಮುತ್ತ ಬರೀ ಅರ್ಕಾಕ್ ಅಂಗಡಿಗಳೇ ಇವೆ, ಫುಟ್‌ಪಾತ್‌ಗಳಮೇಲೆಲ್ಲಾ ಅಂಗಡಿಗಳೇ ಇದ್ದು ಜನರು ಓಡಾಡಲೂ ಸಹ ಬಹಳ ಅಡ್ಡಿಯಾಗುತ್ತಿದೆ. ಈ ಬಸ್ ಸ್ಟ್ಯಾಂಡ್‌ನ್ನು ಕಾರ್ಪೊರೇಷನ್‌ನವರಿಂದ ಕೆ.ಎಸ್.ಆರ್.ಟಿ.ಸಿ. ಯವರು ತೆಗೆದುಕೊಂಡು ಅಭಿವೃದ್ಧಿ ಮಾಡಲಾಗುತ್ತದೆ ಎಂದು ಮಾನ್ಯ ಸಾರಿಗೆ ಸಚಿವರು ಹೇಳುತ್ತಿದ್ದಾರೆ. ಈ ಬಸ್‌ಸ್ಟ್ಯಾಂಡ್‌ನ್ನು ಸಾರಿಗೆ ಸಂಸ್ಥೆಗೆ ತೆಗೆದುಕೊಂಡು ನವೀಕರಿಸುವ ಯೋಜನೆ ಏನಾದರೂ ಇದೆಯೆ ಎಂದು ಕೇಳಿದರೆ ಮೊದಲಂ ಇದನ್ನು ಕೆ.ಎಸ್.ಆರ್.ಟಿ.ಸಿ. ಯವರಂ ವಶಕ್ಕೆ ತೆಗದುಕೊಂಡು ಅನಂತರ ಪ್ಲಾನ್ ಮಾಡುತ್ತೇವೆಂದು ಹೇಳಿದ್ದಾರೆ ಪ್ಲಾನ್ ಮಾಡಿದರೆ ಅದನ್ನು ಯಾವ ರೀತಿ ತೆಗೆದುಕೊಳ್ಳುತ್ತಾರೆಂದು ನನಗೆ ಅರ್ಥವಾಗುವುದಿಲ್ಲ. ಆಕ್ಷಿಗೆ ಬರತಕ್ಕ ಪ್ರಯಾಣಿಕರು ಮಳೆಯಲ್ಲಿ ನೆನೆಯಿ, ಬಿಸಿಲಿನಲ್ಲಿ ಒಣಗಬೇಕಾಗಿದೆ. ಅವರು ನಿಂತುಕೊಳ್ಳಲು ಸರಿಯಾದ ಸ್ಥಳವಿಲ್ಲ. ಆದ್ದರಿಂದ, ಈ ಬಸ್‌ಸ್ಟ್ಯಾಂಡ್‌ನ ಒಳಗೆ ಮತ್ತು ಸುತ್ತ ಮುತ್ತ, ಸ್ವಚ್ಛಮಾಡಿಸಿ ಷೆಲ್ಟರ್‌ಗಳನ್ನು ಕಟ್ಟಿಸಿಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಮುಂದಿನ ಪ್ರಶ್ನೆ ಕುಶಾಲ ಅವರು ಕೇಳಬೇಕು.....

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರ ಪ್ರಶ್ನೆಗೆ ಸಚಿವರು ಉತ್ತರವನ್ನೇ ಕೊಡಲಿಲ್ಲ.

ಅಧ್ಯಕ್ಷರು.—ಅವರು ಪ್ರಶ್ನೆಯನ್ನು ಕೇಳಲಿಲ್ಲ. ಕೇವಲ ಅನುಕೂಲಗಳನ್ನು ಕಲ್ಪಿಸಿಕೊಡ ಬೇಕೆಂದು ಕೇಳಿಕೊಂಡರು ಅಷ್ಟೆ. ಮಲ್ಲಪ್ಪನವರೇ, ನೀವು ವಿನಂತಿ ಮಾಡಿಕೊಂಡು ಕೇಳಿಕೊಳ್ಳುವುದಲ್ಲ ನೀವು ಪ್ರಶ್ನೆಯನ್ನು ಕೇಳಬೇಕು. ಇದು ಸರ್ಕಾರವನ್ನು ಕೇಳಿಕೊಳ್ಳುತ್ತಿರುವ ಟೈಮ್ ಅಲ್ಲ. ಏನಾದರೂ ಕೇಳುವುದಾದರೆ ಪ್ರಶ್ನೆಯನ್ನು ಕೇಳಿ. ಪ್ರಶ್ನೆ ನನ್ನ ಮುಂದೆ ಬರಬೇಕು.

ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ.—ಮಾನ್ಯ ಸಾರಿಗೆ ಸಚಿವರು ಇದನ್ನು ಯಾವಾಗ ಮಾಡಿಸಿ ಕೊಡುತ್ತಾರೆ? ಮತ್ತು ಇದಕ್ಕೆ ಏನಾದರೂ ಒಂದು ಪ್ಲಾನ್ ಇದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ ಈ ಕಲಾಸಿಪಾಳ್ಯಂ ಬಸ್‌ಸ್ಟ್ಯಾಂಡ್ ಬಾರಿ ಹಳೆಯ ದಾಗಿದೆ. ಈಗ ಬೆಂಗಳೂರು ನಗರಸಾರಿಗೆ ಸುಮಾರು ೩೧೨೬ ಟ್ರಿಪ್‌ಗಳನ್ನು ಮತ್ತು ಗ್ರಾಮಾಂತರ ಸಾರಿಗೆ ಸುಮಾರು ೧೪೨ ಟ್ರಿಪ್‌ಗಳನ್ನು ಆ ಬಸ್‌ಸ್ಟ್ಯಾಂಡ್‌ನಿಂದ ಮಾಡುತ್ತಿದೆ ಮತ್ತೆ ಬರೇ ಕೆ. ಎಸ್. ಆರ್. ಟಿ. ಸಿ. ಮಾತ್ರವಲ್ಲ, ಇದನ್ನು ಖಾಸಗಿಯವರು ಸಹ ಉಪಯೋಗಿಸುತ್ತಿದ್ದಾರೆ. ಸುಮಾರು ೧೯೬೩ನೇ ಇಸವಿಯಿಂದಲೂ ಈ ಒಂದು ಜಾಗವನ್ನು ಕೆ. ಎಸ್. ಆರ್. ಸಿ. ಗೆ ಕೊಡ ಬೇಕೆಂಬುದಾಗಿ ಕೆ. ಎಸ್ ಆರ್. ಟಿ. ಸಿ. ಯವರು ನಗರಪಾಲಿಕೆಯವರನ್ನು ಕೇಳುತ್ತಿದ್ದರೂ ಸಹ ಅದು ಇನ್ನೂ ತೀರ್ಮಾನವಾಗಿಲ್ಲ. ಮತ್ತೆ ಇತ್ತೀಚೆಗೆ ಸುಮಾರು ೧೩-೧೦-೮೮ ರಂದು ಅಂದಿನ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಮೀಟಿಂಗ್ ಕರೆಸಿದರು. ಆ ಮೀಟಿಂಗ್‌ನಲ್ಲಿ ನಗರಪಾಲಿಕೆಯವರು ಒಪ್ಪಿದರು. ಆದೇನೆಂದರೆ ಖಾಸಗಿಯವರಿಗೆ "ಬಿ" ಸ್ಟ್ಯಾಂಡ್‌ನಲ್ಲಿ ೨೫ ಅಡಿ ಪಶ್ಚಿಮಕ್ಕೆ ಜಾಗಕೊಟ್ಟು ವಿಸ್ತರಿಸುವಂತೆ ಮಾಡಿ ಬಾಕಿ ಇರುವುದನ್ನು ಕೊಡುತ್ತೇವೆನ್ನುವ ತೀರ್ಮಾನ ತೆಗೆದುಕೊಂಡಿದ್ದರು. ಆದರೆ ಇಲ್ಲಿಯವರೆಗೆ ಬೆಂಗಳೂರು ಸಿಟಿ ಕಾರ್ಪೊರೇಷನ್‌ರವರು ಕೆ. ಎಸ್. ಆರ್. ಟಿ. ಸಿ. ಗೆ ಕೊಡ

ಲಿಲ್ಲ. ನಾನು ಬಂದ ಮೇಲೆ ಈ ವಿಚಾರವಾಗಿ ಕಾಗದ ಬರೆದಿದ್ದೇನೆ. ಆದಷ್ಟು ಬೇಗ ಈ ವಿಚಾರದಲ್ಲಿ ಸಮಿಕ್ಷೆ ಮಾಡಿಸಿಬಿಟ್ಟು ಬೆಂಗಳೂರು ಸಿಟಿ ಕಾರ್ಪೋರೇಷನ್‌ನವರು ಕೆ. ಎಸ್, ಆರ್. ಟಿ. ಸಿ. ಗೆ ಕೊಟ್ಟರೆ ಸಾಕಷ್ಟು ಅನಾನುಕೂಲವನ್ನು ಅಲ್ಲಿ ಪ್ರಯಾಣಿಕರಿಗೆ ಮಾಡಲು ಸಾಧ್ಯವಾಗುತ್ತದೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಬೆಂಗಳೂರು ಸಿಟಿ ಕಾರ್ಪೋರೇಷನ್‌ನವರು ಅಷ್ಟು ಸಲೀಸಾಗಿ ಕೊಡುವುದಿಲ್ಲ. ತಾವು ತಮ್ಮ ಇಲಾಖೆಯಿಂದ ಬೇಡಿಕೆಯನ್ನು ಇಟ್ಟು ಅದನ್ನು ಮೂವ್‌ಮಾಡಿ ಆದಷ್ಟು ಜಾಗತೆ ಕೊಡುತ್ತಾರೆಂದು ನಂಬಿಕೊಂಡಿದ್ದೇವೆ. ದಯವಿಟ್ಟು ತಮ್ಮ ಇಲಾಖೆಯ ಮೂಲಕ ಇದನ್ನು ಮೂವ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ ಜೆ. ಜಾರ್ಜ್.—ಅಧ್ಯಕ್ಷರೇ ಈಗಾಗಲೇ ಹೇಳಿದ್ದೇನೆ. ಹಿಂದಿನ ಸಾರಿಗೆ ಸಚಿವರು ಮಿಟಿಂಗ್ ಕರಿಸಿದಾಗ ಅವರು ಒಪ್ಪಿದ್ದರು. ಮತ್ತೆ ನಾನು ಸಾರಿಗೆ ಸಚಿವನಾದ ಮೇಲೆ ಕಾಗದ ಬರೆದಿದ್ದೇನೆ. ಇನ್ನೊಂದು ಸಭೆಯನ್ನು ಕರೆಸಿ ಅವರು ಆ ಜಾಗವನ್ನು ಕೊಡುವಂತಹ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ಜೆ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ. ನಾನು ಸಾರಿಗೆ ಸಚಿವನಾಗಿದ್ದಂಥ ಕಾಲದಲ್ಲಿ ಸಭೆಯನ್ನು ಕರೆಸಿದ್ದೆ. ಇಲ್ಲಿ ಪ್ರಶ್ನೆ ಇರತಕ್ಕಂಥದ್ದು ಬೆಂಗಳೂರು ನಗರ ಕಾರ್ಪೋರೇಷನ್‌ರವರು ಒಳ್ಳೆ ದುಡ್ಡು ಕೇಳುತ್ತಿದ್ದಾರೆ. ಆದ್ದರಿಂದ ತಮ್ಮನ್ನು ಕೇಳುವುದು, ಏನೆಂದರೆ ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಸಚಿವರಾದ ತಾವು ಸಹ ಕುಳಿತುಕೊಂಡು ಅಧಿಕಾರಿಗಳನ್ನು ಕರೆಸಿ ದುಡ್ಡು ಕೊಡುವ ಬಗ್ಗೆ ನಿರ್ಧಾರ ಮಾಡಿ. ಅವರು ೭-೮ ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಅಷ್ಟು ದುಡ್ಡನ್ನು ಕೊಡುವುದಕ್ಕಾಗುವುದಿಲ್ಲ. ೫೦ ಲಕ್ಷವೊ ಅಥವಾ ಒಂದು ಕೋಟಿ ರೂಪಾಯಿಗಳಲ್ಲಿಯೇ ಅದನ್ನು ಬಗೆಹರಿಸಿಕೊಳ್ಳಬಹುದು. ಆರೀತಿ ಮಾಡಲಿಕ್ಕೆ ಸಾಧ್ಯವೇ ಎಂದು ಕೇಳಬಯಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್:— ಮಾನ್ಯ ಅಧ್ಯಕ್ಷರೇ ಮಿಟಿಂಗ್ ೧೩-೧೦-೭೮ರಲ್ಲಿ ನಡೆದಿದೆ. ತಾವೇ ಅಧ್ಯಕ್ಷತೆ ವಹಿಸಿದ್ದು. ಆದರೆ ಆ ಮಿಟಿಂಗ್‌ನಲ್ಲಿ ದುಡ್ಡಿನ ವಿಚಾರ ಬರಲಿಲ್ಲ. ಮಿಟಿಂಗ್‌ನಲ್ಲಿ ಏನು ಹೇಳಿದ್ದಾರೆಂದರೆ "ಬಿ" ಸ್ಟ್ರೀಟ್‌ನಲ್ಲಿ ೨೫ ಅಡಿ ಪಶ್ಚಿಮಕ್ಕೆ ಜಾಗವನ್ನು ವಿಸ್ತರಿಸಿ ಪಾಸಗಿಯವರಿಗೆ ಕೊಡುತ್ತೇವೆಂಬ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಆಗ ದುಡ್ಡಿನ ವಿಚಾರ ಏನೂ ಬಂದಿರಲಿಲ್ಲ. ಬಹುಶಃ ನಮ್ಮ ಪ್ರೊಸೀಡಿಂಗ್ಸ್ ಪ್ರಕಾರ ಆದು ಆಗಲಿಲ್ಲ ಇನ್ನೊಂದು ಸಾರಿ ಬೇಕಾದರೆ ನಾನು ಕಾರ್ಪೊರೇಷನ್ ಕಮಿಷನರ್ ಜೊತೆಯಲ್ಲಿ ಮಾತನಾಡುತ್ತೇನೆ.

ಶ್ರೀ ಎಸ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಾರಿಗೆ ಸಚಿವರು ಹೇಳಿದ ಹಾಗೆ ಕಳಾಸಿಪಾಳ್ಯಂ ಬಸ್‌ಸ್ಟಾಂಡ್ ಒಂದೇ ಅಲ್ಲ. ಬೆಂಗಳೂರಿನಲ್ಲಿ ಶಿವಾಜಿನಗರ ಬಸ್‌ಸ್ಟಾಂಡ್ ಇದೆ. ಅಲ್ಲಿಂದ ಬೇರೆ ಕಡೆಗೆ ಬಸ್‌ನ ಸೌಲಭ್ಯ ಕೊಡಿ ಎಂದರೆ ಜಾಗದ ಅನುಕೂಲ ಅಲ್ಲಿ ಇಲ್ಲವೆಂದು ಹೇಳುತ್ತಾರೆ. ತಾವು ಆ ಒಗ್ಗೆಯೂ ಕ್ರಮ ತೆಗೆದು ಕೊಳ್ಳಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಜೆ. ಜಾರ್ಜ್.—ನಮ್ಮ ಸರ್ಕಾರ ಬಂದ ಮೇಲೆ ನಾನು ಸಾರಿಗೆ ಸಚಿವನಾದಮೇಲೆ ಶಿವಾಜಿನಗರ ಬಸ್‌ಸ್ಟಾಂಡಿಗೆ ಭೇಟಿ ನೀಡಿದ್ದೇನೆ ಈಗಾಗಲೇ ಕಾರ್ಪೊರೇಷನ್‌ನವರು ನಮ್ಮ ಕೆ. ಎಸ್. ಆರ್ ಟಿ. ಸಿ. ಗೆ ಆ ಜಾಗವನ್ನು ಬಿಟ್ಟುಕೊಟ್ಟಿದ್ದಾರೆ. ಸುಮಾರು ೪೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಅಲ್ಲಿ ಹೊಸ ಬಸ್‌ಸ್ಟಾಂಡ್ ಕಟ್ಟಲಿಕ್ಕೆ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. ಆದಷ್ಟು ಬೇಗ ಆ ಬಸ್‌ಸ್ಟಾಂಡ್ ಕಟ್ಟಲಿಕ್ಕೆ ನಾವು ಸರ್ವಪ್ರಯತ್ನವನ್ನು ಮಾಡುತ್ತೇವೆಂದು ಹೇಳುತ್ತೇನೆ.

ಸಂಖ್ಯ ಹಾಗೂ ಪುತ್ತೂರು ತಾಲ್ಲೂಕುಗಳಲ್ಲಿನ ರಸ್ತೆಗಳು ಹಾಗೂ ಸೇತುವೆಗಳು

೨೧೭. ಶ್ರೀ ಕೆ ಕುಶಾಲ, (ಸುಳ್ಯ).—ಮಾನ್ಯ ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸುಳ್ಯಾ ತಾಲ್ಲೂಕು ಮತ್ತು ಪುತ್ತೂರು ತಾಲ್ಲೂಕಿನಲ್ಲಿ ಅಂತರಜಿಲ್ಲಾ ರಸ್ತೆ ಮತ್ತು ಅಂತಹ ರಸ್ತೆಗಳಲ್ಲಿ ಬರುವ ಸೇತುವೆಗಳ ಸಂಖ್ಯೆ ಎಷ್ಟು ? ಮತ್ತು ಆ ರಸ್ತೆಗಳ ಬಟ್ಟು ಉದ್ದಳತೆ ಎಷ್ಟು ?